| | | | |
|---|---|---|---|
| ಕರ್ನಾಟಕ ಸರ್ಕಾರ<br>(ಸಿ.ಆರ್.ಪಿ-67) | | | |
| ಹೇಳಿಕೆ ಹಾಳೆ (ಆರ್.ಸಿ. ಸಂಖ್ಯೆ 57) ನಮೂನೆ ಸಂಖ್ಯೆ 4 | ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಚನ್ನಪಟ್ಟಣ | | |
| | ಸಿ.ಸಿ ನಂ. 3891/2023 | | |
| | | ಸಿ.ಡಬ್ಲೂ | 6 |
| | | ಪಿ.ಡಬ್ಲೂ | 4 |
| ಸಾಕ್ಷಿದಾರರ ಹೆಸರು | ಶಿವರಾಜು.ಡಿ ಬಿನ್ ದೊಡ್ಡಮಾದಶೆಟ್ಟಿ | | |
| ವಯಸ್ಸು | 33 ವರ್ಷ | | |
| ಉದ್ಯೋಗ | ಪಿ.ಸಿ, ಅಕ್ಕೂರು ಪೊಲೀಸ್ ಠಾಣೆ, ಚನ್ನಪಟ್ಟಣ | | |
| ವಾಸಸ್ಥಳ | ಚನ್ನಪಟ್ಟಣ | | |

ದಿನಾಂಕಃ **16.07.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ- ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

**1)** ನಾನು **2022** ರಲ್ಲಿ ನಾನು ಚನ್ನಪಟ್ಟಣದ ಎಂ.ಕೆ. ದೊಡ್ಡಿ ಪೋಲಿಸ್ ಠಾಣೆಯಲ್ಲಿ ಪಿ.ಸಿ ಆಗಿ ಕರ್ತವ್ಯ ಮಾಡುತ್ತಿದ್ದೆನು. ನನ್ನನ್ನು ಸದರಿ ಠಾಣೆಯಿಂದ ತುರ್ತು ವಾಹನ ಸಂಖ್ಯೆ **112** ರ ವಾಹನದಲ್ಲಿ ಗಸ್ತು ಕರ್ತವ್ಯಕ್ಕೆ ನೇಮಕ ಮಾಡಿದ್ದು ಅದರ ಮೇರೆಗೆ ನಾನು ಸೆಪ್ಟೆಂಬರ್ **2022** ರಲ್ಲಿ ಸದರಿ ವಾಹನದಲ್ಲಿ ಗಸ್ತು ಕರ್ತವ್ಯವನ್ನು ಮಾಡುತ್ತಿದ್ದೆನು. ಆ ವೇಳೆಗೆ ಚಾಸಾ-**5** ರವರು ಸದರಿ ವಾಹನದ ಚಾಲಕನಾಗಿ ನೇಮಕಗೊಂಡಿದ್ದರು. ದಿಃ**23.09.2022** ರಂದು ಬೆಳಿಗ್ಗೆ **09.30** ರ ಸಮಯದಲ್ಲಿ ಕಂಟ್ರೋಲ್ ರೂಂ ಮೂಲಕ ನಮಗೆ ಈ ಪ್ರಕರಣದ ಪಿರ್ಯಾದಿ ಕೃಷ್ಣೇಗೌಡರು ದೂರು ನೀಡಿರುವುದಾಗಿ ಮಾಹಿತಿ ಬಂದಿತ್ತು. ನಂತರ ರೂಟ್ ಮ್ಯಾಪ್ ಹಾಕಿಕೊಂಡು ಗುನ್ಹಾ ಸ್ಥಳವನ್ನು ಹುಡುಕಿ ಹೋದೆವು. ಅಲ್ಲಿಗೆ ಹೋದಾಗ ಸಮಯ **10** ಗಂಟೆ ಆಗಿತ್ತು. ನಾವು ಸ್ಥಳಕ್ಕೆ ಹೋದಾಗ ಚಾಸಾ-**1** ರವರು ನಮ್ಮ ಬಳಿಗೆ ಬಂದು ತಾನೇ **112** ಕ್ಕೆ ಕರೆ ಮಾಡಿದಾಗಿ ತಿಳಿಸಿದರು.

**2)** ಚಾಸಾ-**1** ರವರನ್ನು ವಿಚಾರಣೆ ಮಾಡಲಾಗಿ ಆತ ತನ್ನ ಜಮೀನಿನ ಬಳಿ ಕೂಡ್ಲೂರು ಗ್ರಾಮದಲ್ಲಿ ಯಾರೋ ವ್ಯಕ್ತಿ ಅನುಮಾನಾಸ್ಪದವಾಗಿ ಒಂದು ಸೀಮೆ ಹಸುವನ್ನು ಹಿಡಿದುಕೊಂಡು ಹೋಗುತ್ತಿರುವುದಾಗಿ ಕಂಡು ಬಂದ ಕಾರಣ ತಾನು ಆ ಬಗ್ಗೆ **112** ಕ್ಕೆ ಕರೆ ಮಾಡಿದಾಗಿ ತಿಳಿಸಿದರು. ಕಂಟ್ರೋಲ್ ರೂಂ ಗೆ ಚಾಸಾ-**1** ರವರು ಕರೆ ಮಾಡಿದಾಗ ಅವರಿಗೆ ಕಂಟ್ರೊಲ್ ರೂಂ ನಿಂದ ಸೀಮೆ ಹಸುವನ್ನು ಹಿಡಿದುಕೊಂಡು ಹೋಗುತ್ತಿರುವ ವ್ಯಕ್ತಿಯನ್ನು ಹಿಂಬಾಲಿಸುವಂತೆ ಹೇಳಿದ್ದರು. ಅದರಂತೆ ಚಾಸಾ-**1** ರವರು ಆ ವ್ಯಕ್ತಿಯನ್ನು

ಹಿಂಬಾಲಿಸಿಕೊಂಡು ಹೋಗುವಾಗ ನಾವು ಆತನು ಹೋಗುವ ಮಾರ್ಗದಲ್ಲಿ ಹೋಗಿ ಆತನನ್ನು ಭೇಟಿ ಆಗಿದ್ದೆವು. ಸ್ಥಳದಲ್ಲಿ ಚಾಸಾ-1 ರವರು ಹಸುವನ್ನು ಹಿಡಿದುಕೊಂಡು ಹೋಗುತ್ತಿದ್ದ ವ್ಯಕ್ತಿಯನ್ನು ನಮಗೆ ತೋರಿಸಿದರು. ಹಸುವನ್ನು ಹಿಡಿದುಕೊಂಡ ವ್ಯಕ್ತಿಯನ್ನು ನಾವು ವಿಚಾರಣೆ ಮಾಡಿದೆವು. ಆ ವ್ಯಕ್ತಿ ತನ್ನ ಹೆಸರು ಪುಟ್ಟಸ್ವಾಮಿ ಬಿನ್ ಶ್ರೀನಿವಾಸ ಆಗಿದ್ದು, ತಾನು 2 ನೇ ಆರೋಪಿತನ ಮಾಹಿತಿ ಮೇರೆಗೆ ಸೀಮೆ ಹಸುವನ್ನು ಚಾಸಾ-4 ಕಿರಣ್ ರವರ ಮನೆಯಿಂದ ಮಾರಾಟ ಮಾಡುವ ಸಲುವಾಗಿ ಅದನ್ನು ಕೂಡ್ಲೂರು ಕಡೆಯಿಂದ ಚನ್ನಪಟ್ಟಣದ ಕಡೆಗೆ ಕರೆದುಕೊಂಡು ಹೋಗುತ್ತಿರುವುದಾಗಿ ತಿಳಿಸಿದನು. ನಂತರ ನಾವು ಸಿಕ್ಕ ಪುಟ್ಟಸ್ವಾಮಿ ರವರನ್ನು ಮತ್ತು ಹಸುವನ್ನು ಹಿಡಿದು ಚನ್ನಪಟ್ಟಣದ ಗ್ರಾಮಾಂತರ ಪೋಲಿಸ್ ಠಾಣೆಗೆ ತೆಗೆದುಕೊಂಡು ಹೋಗಿ ಹಾಜರುಪಡಿಸಿದೆವು. ತದನಂತರ ಚಾಸಾ-1 ರವರೂ ಸಹ ಠಾಣೆಗೆ ಹಾಜರಾಗಿ ದೂರನ್ನು ದಾಖಲಿಸಿರುತ್ತಾರೆ. ನಾವು ಹಿಡಿದಿದ್ದ ಹಸುವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನಿಪಿ.2 ಮತ್ತು 3 ರ ಭಾವಚಿತ್ರಗಳಲ್ಲಿ ಇರುವ ಹಸುವನ್ನು ನೋಡಿ ಗುರುತಿರುತ್ತಾರೆ. ನಾನು ಈ ಎಲ್ಲಾ ವಿಚಾರಗಳ ಕುರಿತು ಹೇಳಿಕೆಯನ್ನು ನೀಡಿರುತ್ತೇನೇ. ನಾವು ಹಿಡಿದ ಪುಟ್ಟಸ್ವಾಮಿ ರವರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 1 ನೇ ಆರೋಪಿತನನ್ನು ನೋಡಿ ಗುರುತಿರುತ್ತಾರೆ.

**ಮರುವಿಚಾರಣೆ ಇಲ್ಲ.**

**<u>ಪಾಟೀ ಸವಾಲುಃ ಆರೋಪಿತನ ಪರ ಶ್ರೀ ಬಿ.ಎನ್.ಎಸ್. ವಕೀಲರಿಂದ</u>**

**1)** ನಮಗೆ ಕಂಟ್ರೋಲ್ ರೂಂ ನಿಂದ ಈ ಪ್ರಕರಣದ ಸಂಬಂಧ ಮಾಹಿತಿ ಬಂದ ಕಾಲಕ್ಕೆ ನಾನು ಚನ್ನಪಟ್ಟಣದ ಮಹದೇಶ್ವರ ನಗರದಲ್ಲಿ ಇಲಾಖಾ ವಾಹನದಲ್ಲಿ ಇದ್ದೆನು. ಸದರಿ ವಾಹನದ ನೋಂದಣಿ ಸಂಖ್ಯೆ ಕೆಎ 19 ಜಿ 0798. ನಾವು ಇದ್ದ ಸ್ಥಳದಿಂದ ಗುನ್ಹಾ ಸ್ಥಳ 6 ರಿಂದ 8 ಕಿ.ಮೀ ಇದೆ ಎಂದರೆ ಸರಿ. ಕೂಡ್ಲೂರು ಕೆರೆಯಿಂದ ಮಸಿಗೌಡನ ದೊಡ್ಡಿಯಲ್ಲಿ ಇರುವ ತಿರುಮಲ ದೇವಸ್ಥಾನವು 7 ರಿಂದ 8 ಕಿ.ಮೀ ಅಂತರದಲ್ಲಿ ಇದೆ ಎಂದರೆ ಸರಿಯಲ್ಲ ಹಾಗೂ ನಿಖರವಾಗಿ ಅದು ಎಷ್ಟು ಕಿಲೋ ಮೀಟರ್ ಅಂತರದಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. ನನ್ನನ್ನು 112 ರ ಇಲಾಖಾ ವಾಹನದಲ್ಲಿ ಗಸ್ತು ಕರ್ತವ್ಯಕ್ಕೆ ನೇಮಕ ಮಾಡಿದ ಸಂಬಂಧ ಲಿಖಿತ ಆದೇಶ ಇರುವುದಿಲ್ಲ. ಆದರೆ ಆ ಬಗ್ಗೆ ಠಾಣಾ ದಿನಚರಿಯಲ್ಲಿ ನಮೂದಿಸಿರುತ್ತಾರೆ.

**2)** ನಾವು ಸ್ಥಳದಲ್ಲಿ **1** ನೇ ಆರೋಪಿತನನ್ನು ಹಿಡಿದ ಕಾಲಕ್ಕೆ ಅಲ್ಲಿ **10** ರಿಂದ **12** ಜನರು ಹಾಜರಿದ್ದರು. ಆ ಸ್ಥಳದಲ್ಲಿ ಸಾಕಷ್ಟು ಜನರು ಓಡಾಡುತ್ತಾರೆ ಎಂದರೆ ಸಾಕ್ಷಿಯು ಸಾಕಷ್ಟು ಜನ ಓಡಾಡುವುದಿಲ್ಲ ಎಂದು ನುಡಿಯುತ್ತಾರೆ. ಆ ಸ್ಥಳದ ಅಕ್ಕಪಕ್ಕದಲ್ಲಿ ಸಾಕಷ್ಟು ಮನೆಗಳು ಮತ್ತು ಅಂಗಡಿಗಳು ಇವೆ ಎಂದರೆ ಸರಿ. ಅಲ್ಲಿ ರೈತರು ಜಾನುವಾರುಗಳನ್ನು ಹಿಡಿದುಕೊಂಡು ಹೋಗುತ್ತಾರೆ ಎಂದರೆ ಸರಿಯಲ್ಲ. ನಾನು ಗುನ್ನಾ ಸ್ಥಳಕ್ಕೆ ಹೋಗುವ ಪೂರ್ವದಲ್ಲಿಯೇ ಚಾಸಾ-**1** ರವರು ಆರೋಪಿತನನ್ನು ಹಿಂಬಾಲಿಸಿಕೊಂಡು ಆ ಸ್ಥಳಕ್ಕೆ ಹೋಗಿದ್ದರು. ನಾನು ಹೇಳಿದಂತೆ ಚಾಸಾ-**1** ರವರು ಆ ಸ್ಥಳದಲ್ಲಿ ಹಾಜರಿರಲಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ನನ್ನನ್ನು ಆ ದಿನ ಗಸ್ತು ಕರ್ತವ್ಯಕ್ಕೆ ನೇಮಕ ಮಾಡಿರಲಿಲ್ಲ ಮತ್ತು ನಾನು ಗುನ್ನಾ ಸ್ಥಳಕ್ಕೆ ಭೇಟಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಚಾಸಾ-**1** ರವರು ಗುನ್ನಾ ಸ್ಥಳಕ್ಕೆ ಬಂದು ನಮಗೆ ಯಾವುದೇ ಮಾಹಿತಿ ನೀಡಿಲ್ಲ ಎಂದರೆ ಸರಿಯಲ್ಲ. **1** ನೇ ಆರೋಪಿತನು ಗುನ್ನಾ ಸ್ಥಳದಲ್ಲಿ ಇರಲಿಲ್ಲ ಮತ್ತು ಆತ ಯಾವುದೇ ಹಸುವನ್ನು ಹಿಡಿದುಕೊಂಡು ಹೋಗುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು **1** ನೇ ಆರೋಪಿತನನ್ನು ಸ್ಥಳದಲ್ಲಿ ವಿಚಾರಣೆ ಮಾಡಿಲ್ಲ ಎಂದರೆ ಸರಿಯಲ್ಲ. ಠಾಣಾ ಅಂಕೆ ಸಂಖ್ಯೆಗೋಸ್ಕರ ಸುಳ್ಳು ಪ್ರಕರಣ ದಾಖಲಿಸಿದ್ದ ಕಾರಣ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಗುನ್ನಾ ಸ್ಥಳದಲ್ಲಿ ಆರೋಪಿತನನ್ನು ಹಿಡಿದ ಬಗ್ಗೆ ಚಾಸಾ-**7** ರವರಿಗೆ ದೂರವಾಣಿ ಕರೆ ಮೂಲಕ ಮಾಹಿತಿ ನೀಡಿದ್ದು ನಂತರ ಅವರ ನಿರ್ದೇಶನದ ಮೇರೆಗೆ ನಾವು ಆರೋಪಿತನನ್ನು ಮತ್ತು ಹಸುವನ್ನು ಹಿಡಿದು ಠಾಣೆಗೆ ಕರೆದುಕೊಂಡು ಹೋಗಿ ಹಾಜರುಪಡಿಸಿದ್ದೆವು. ನಾವುಗುನ್ನಾ ಸ್ಥಳಕ್ಕೆ ಹೋದ ತಕ್ಷಣವೇ ಚಾಸಾ-**7** ರವರಿಗೆ ಮಾಹಿತಿ ನೀಡಿದ್ದೆವು. ನಾನು ಆ ರೀತಿ ಯಾವುದೇ ಮಾಹಿತಿ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ರೀತಿ ಹೇಳಿಕೆಯನ್ನು ಚಾಸಾ-**7** ರವರಿಗೆ ನೀಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು)**

ಓ.ಹೆ.ಕೆ.ಸರಿ ಇದೆ.

ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ.ದಂ.ಗಳು
ಚನ್ನಪಟ್ಟಣ